( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ಅಸಲು ದಾವೆ ನಂ.154/2015

ದಿನಾಂಕಃ 01-02-2024, ಪಿ ಡಬ್ಲ್ಯೂ–1

ಮುಂದುವರೆದ ಪಾಟೀ ಸವಾಲು ಃ ಶ್ರೀ ಎ ಆರ್ ಜೆ ವಕೀಲರಿಂದಃ

ದಾವಾ ಸರ್ವೆ ನಂ. ಜಮೀನಿನಲ್ಲಿ ಮೂಲತಃ 2 ಎಕರೆ 19 ಗುಂಟೆ ಜಮೀನು ಇತ್ತು. ದಾವಾ ಸರ್ವೆ ನಂಬರ್ ಜಮೀನು ನನ್ನ ತಂದೆಯ ಪಿತ್ರಾರ್ಜಿತ ಆಸ್ತಿಯಾಗಿತ್ತು ಎಂದರೆ ಸರಿ. ಸದರಿ ಜಮೀನಿನ ಕಂದಾಯವನ್ನು ಸರ್ಕಾರಕ್ಕೆ ಪಾವತಿಸದೇ ಇದ್ದುದರಿಂದ ಸರ್ಕಾರಿ ಬೀಳು ಎಂದು ಆಯಿತು ಎಂದರೆ ಸರಿ.

ನನ್ನ 2 ನೇ ದೊಡ್ಡಪ್ಪ ಅಪ್ಪಣ್ಣೀಗೌಡರು. ದಾವಾ ಸರ್ವೆ ನಂಬರ್ ಜಮೀನು ಸರ್ಕಾರಿ ಬೀಳು ಆದ್ದರಿಂದ ನನ್ನ ದೊಡ್ಡಪ್ಪ ಅಪ್ಪಣ್ಣೀಗೌಡರಿಗೆ ದರಕಾಸ್ತು ಮೂಲಕ ಮಂಜೂರಾಗಿತ್ತು ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರ್ ಸರ್ಕಾರಿ ಬೀಳಿನಿಂದ ನನ್ನ ತಂದೆಗೆ ಪುನರ್‌ಸ್ಥಾಪನೆಯಾಯಿತು. ಅದಕ್ಕೆ ಸಂಬಂದ ಪಟ್ಟ ಆರ್ ಆರ್ 5 ಮತ್ತು 6 ಪ್ರತಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ. ನನ್ನ ತಂದೆಗೆ ಪುನರ್‌ಸ್ಥಾಪನೆಯಾದ ಬಗ್ಗೆ ಆದೇಶದ ನಕಲು ಹಳೆಯದಾದ್ದರಿಂದ ಸಿಗಲಿಲ್ಲ. ಈ ಸಂಬಂದ ಹಿಂಬರಹವನ್ನು ಕೊಟ್ಟಿಲ್ಲ.

ನನ್ನ ದೊಡ್ಡಪ್ಪ ಅವರಿಗೆ ದಾವಾ ಸರ್ವೆ ನಂಬರ್ ಮಂಜೂರಾದ ನಂತರ ಷರತ್ತನ್ನು ಉಲ್ಲಂಗಿಸಿ ಬಸವೇಗೌಡ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ಕಾರಿ ಬೀಳಿನಿಂದ ನನ್ನ ತಂದೆಗೆ ದಾವಾ ಸರ್ವೆ ನಂಬರ್ ಪುನರ್‌ಸ್ಥಾಪನೆಯಾದ ನಂತರ ನಾವು ಜಂಟಿ ಖಾತೆ ಹೊಂದಿರುತ್ತೇವೆ ಎಂದು ಸಾಕ್ಷಿಯು ಮುಂದುವರೆದು ನುಡಿಯುತ್ತಾರೆ. ನನ್ನ ದೊಡ್ಡಪ್ಪ ಷರತ್ತು ಉಲ್ಲಂಗಿಸಿ ಬಸವೇಗೌಡರಿಗೆ ಮಾರಾಟ ಮಾಡಿದ್ದರಿಂದ ಉಪವಿಭಾಗಾಧಿಕಾರಿಗಳು ಹಾಸನ ಇವರು ಮಂಜೂರಾತಿಯನ್ನು ರದ್ದುಪಡಿಸಿರುತ್ತಾರೆ ಎಂರದೆ ನನಗೆ ಗೊತ್ತಿಲ್ಲ. ಮಂಜೂರಾತಿ ರದ್ದಾದ ನಂತರ ದಾವಾ ಸರ್ವೆ ನಂಬರ್ ಆಸ್ತಿ ಸರ್ಕಾರದ ಸ್ವಾಧೀನಕ್ಕೆ ಹೋಯಿತು ಎಂದರೆ ಸರಿಯಲ್ಲ.

ದಾವಾ ಸರ್ವೆ ನಂಬರ್ ಜಮೀನು ಸರ್ಕಾರಕ್ಕೆ ಸೇರಿದ್ದರಿಂದ ನಮ್ಮ ಕುಟುಂಬದ ಸ್ವಾಧೀನದಲ್ಲಿ ಎಂದೂ ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ತಂದೆ ಮತ್ತು 2 ನೇ ಪ್ರತಿವಾದಿಯ ತಂದೆ ಅಣ್ಣ ತಮ್ಮಂದಿರು ಎಂದರೆ ಸರಿ, ಸಾಕ್ಷಿಯು ಮುಂದುವರೆದು ನನ್ನ ಮೊದಲನೇ ದೊಡ್ಡಪ್ಪನ ಮಕ್ಕಳು ಎಂದು ನುಡಿಯುತ್ತಾರೆ.

1 ನೇ ಪ್ರತಿವಾದಿಯ ತಂದೆ ಮತ್ತು 2 ನೇ ಪ್ರತಿವಾದಿಯ ತಂದೆ 1973-74 ರಿಂದ ದಾವಾ ಆಸ್ತಿಯ ಸರ್ವೆ ನಂಬರ್ ನಲ್ಲಿ ಅಕ್ರಮವಾಗಿ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ

ತಂದೆ ಮತ್ತು 2 ನೇ ಪ್ರತಿವಾದಿಯ ತಂದೆ ಮೃತರಾದ ನಂತರ 1 ಮತ್ತು 2 ನೇ ಪ್ರತಿವಾದಿಯರು ದಾವಾ ಆಸ್ತಿಯ ಸರ್ವೆ ನಂಬರ್ ನಲ್ಲಿ ಅಕ್ರಮವಾಗಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಈ ಸಂಬಂಧ 1 ಮತ್ತು 2 ನೇ ಪ್ರತಿವಾದಿಯರು ಬಗರ್ ಹುಕ್ಕುಂ ಸಮಿತಿಗೆ ಅಕ್ರಮ ಸಕ್ರಮ ಕೋರಿ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

1973-74 ರಿಂದ 1 ಮತ್ತು 2 ನೇ ಪ್ರತಿವಾದಿಯರ ತಂದೆ ಹಾಗೂ ಅವರ ಪೌತಿಯಾದ ನಂತರ 1 ಮತ್ತು 2 ನೇ ಪ್ರತಿವಾದಿಯರು ಅಕ್ರಮವಾಗಿ ದಾವಾ ಸರ್ವೆ ನಂಬರ್ ಜಮೀನಿನಲ್ಲಿ ಅಕ್ರಮವಾಗಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ದಾವಾ ಸರ್ವೆ ನಂಬರಿ ಜಮೀನು ಪಾಳು ಬಿದ್ದಿದ್ದ ಬಗ್ಗೆ, ನನ್ನ ದೊಡ್ಡಪ್ಪ ಅಪ್ಪಣ್ಣೇಗೌಡರಿಗೆ ಮಂಜೂರಾದ ಬಗ್ಗೆ ಮತ್ತು ಮಂಜೂರಾತಿ ರದ್ದಾದ ಬಗ್ಗೆ ನನಗೆ ಮತ್ತು ನನ್ನ ಅಣ್ಣ ತಮ್ಮಂದಿರಿಗೆ ಗೊತ್ತಿತ್ತು ಎಂದರೆ ಸರಿಯಲ್ಲ.

ನಾನು ಮತ್ತು 3 ನೇ ಪ್ರತಿವಾದಿಯ ವಾರಸುದಾರರು ಚೆನ್ನಾಗಿದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು 3 ನೇ ಪ್ರತಿವಾದಿಯ ವಾರಸುದಾರರು ಷರೀಕ್ಕಾಗಿ ಈ ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ. ನಾನು ಕಂದಾಯ ಇಲಾಖೆಯಲ್ಲಿ ತಹಶೀಲ್ದಾರ್‌ರಾಗಿದ್ದುದರಿಂದ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು 1 ಮತ್ತು 2 ನೇ ಪ್ರತಿವಾದಿಯರಿಂದ ಅಕ್ರಮವಾಗಿ ಕಬಳಿಸುವ ಉದ್ದೇಶದಿಂದ ನಾನು ಮತ್ತು 3 ನೇ ಪ್ರತಿವಾದಿಯ ವಾರಸುದಾರರು ಈ ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಕಾಲವಕಾಶ ನೀಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸ.ಇದೆ.**

(ರಘು ಎಂ.)
2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಅರಕಲಗೂಡು